ತಿಳಿಸಿದ. "ಯಾಕೆ ಸಿಸಿಟೀವಿ ಕ್ಯಾಮೆರಾ ಅಳವಡಿಸಿಲ್ಲ?" ನಾನು ಅನುಮಾನ ಹೊರಹಾಕಿದೆ.

"ಸಿಸಿಟೀವಿ ಕ್ಯಾಮೆರಾದವ್ನು ಇಂದು, ನಾಳೆ ಅಂತ ದಿನಾ ದೂಡ್ತಾ ಇದಾನೆ. ಆಸಾಮಿಗೆ ಮುಂಗಡ ಕೂಡಾ ಕೊಟ್ಟಾಗಿದೆ... ಇವ್ರಿಗೆಲ್ಲಾ ಬಿಸಿನೆಸ್ ಹೆಚ್ಚಾಗಿದೆ." ಉತ್ತಯ್ಯ ಶಪಿಸಿದ.

"ಸೋಮಯ್ಯನಲ್ಲಿ ರಿವಾಲ್ವರ್ ಇತ್ತೆ?" ಕೇಳಿದವನು ಕರಮಚಂದ.

ಉತ್ತರವೆಂಬಂತೆ ಉತ್ತಯ್ಯ ಸೋಮಯ್ಯನ ಮೇಜಿನ ಬಲಭಾಗದ ಕೆಳಗಿನ ಸೆಳೆಖಾನೆಯ ಕದ ತೆರೆದು, ಬಗ್ಗಿ, ಕೈ ಒಳಗೆ ತೂರಿದ. ತುಸು ತಡಕಾಡಿದವನ ಮೋರೆಯಲ್ಲಿ ಕಂಡು ಬಂದ ಅಚ್ಚರಿ... ರಿವಾಲ್ವರ್ ಅಲ್ಲಿ ಇಲ್ಲವೆಂಬುದನ್ನು ಸ್ಪಷ್ಟಪಡಿಸಿತ್ತು!

"ಅವ್ರು ಅದನ್ನು ಇಲ್ಲೇ ರಹಸ್ಯ ಅರೆಯಲ್ಲಿ ಇರಿಸಿದ್ದರು..."

ಅಷ್ಟರಲ್ಲಿ ನಾನು ಎಡಭಾಗದ ಸೆಳೆಖಾನೆ ತೆರೆದು ಹುಡುಕಾಟ ನಡೆಸಿದೆ. ಅದರಲ್ಲಿ ಚೆಕ್ ಬುಕ್ಕು ಕಾಣಿಸಿತು. ಕರಮಚಂದ ಅದನ್ನು ಆಸ್ಥೆಯಿಂದ ಎತ್ತಿಕೊಂಡ. ನಾನು ಇನ್ನಷ್ಟು ಜಾಲಾಡಿದಾಗ, ಚರ್ಮದ ಚೀಲ ಕಣ್ಣು ರಾಚಿತು... ರಿವಾಲ್ವರ್ ಕೇಸ್!

"ಅದು ಅಲ್ಲಿ ಹೇಗೆ ಬಂದಿತು? ಅದರೊಳಗಿದ್ದ ರಿವಾಲ್ವರ್ ಎಲ್ಲಿ?" ಉತ್ತಯ್ಯನಿಗೆ ಸೋಜಿಗ.

"ಪ್ರಾಯಶಃ ಯಾವುದೋ ಅಪಾಯವನ್ನು ಮನಗಂಡು, ಸೋಮಯ್ಯ ಮೊದಲೇ ರಿವಾಲ್ವರ್ ತೆಗೆದಿರಿಸಿದ್ದನೆ?"

"ಇರಲೂಬಹುದು."

"ಉತ್ತಯ್ಯ, ಸೋಮಯ್ಯ ಯಾಕೆ ಕುಶನ್ ಕುರ್ಚಿ ಬಳಸ್ತಾ ಇಲ್ಲ?"

"ಅವ್ರಿಗೆ ಮೂಲವ್ಯಾಧಿ ಕಾಯಿಲೆ ಇರೋದ್ರಿಂದ ಕುಶನ್ ಬಳಸ್ತಿಲ್ಲ."

ಕರಮಚಂದನಿಗೆ ನಾನು ಫೈಲುಗಳು ಚೆಲ್ಲಾಪಿಲ್ಲಿಯಾಗಿದ್ದನ್ನು ತೋರಿದೆ. ಆತ ನಿಧಿ ಸಿಕ್ಕಿದವನಂತೆ ಅವುಗಳನ್ನು ಕುತೂಹಲದಿಂದ ಪರೀಕ್ಷಿಸಿದ. ನಾವು ತುಸು ಹೊತ್ತು ಅಲ್ಲಿ ಹುಡುಕಾಟ ನಡೆಸಿ, ಹೊರಬಂದು, ಸೋಮಯ್ಯನ ಕಚೇರಿಯ ಪಕ್ಕದಲ್ಲಿದ್ದ ಪ್ಯಾಸೇಜಿನಲ್ಲಿ ಹೆಜ್ಜೆ ಹಾಕಿದೆವು. ಅಲ್ಲಿಂದ ಕ್ಯಾಬಿನ್ನಿನೊಳಗೆ ದೃಷ್ಟಿ ಹಾಯಿಸಿದ ಕರಮಚಂದ. ಮತ್ತೆ ಅಲ್ಲಿಂದ ಚಲಿಸಿ, ಹಿಂದುಗಡೆಯವರೆಗೂ ಹೋದ. ನಾನು ಆತನನ್ನು ಹಿಂಬಾಲಿಸಿದೆ.

"ಬಿದ್ದಪ್ಪ, ಅಲ್ಲಿ ನೋಡು, ಪಾಗಾರದ ಮೇಲೆ ಇರಿಸಿದ ಕಲ್ಲುಗಳು..."

ನನಗೆ ಅದರಲ್ಲಿ ವಿಶೇಷವೇನೂ ಕಾಣಿಸಲಿಲ್ಲ. ಪಾಗಾರದ ಮೇಲೆ ಎರಡು ಬಲವಾದ ಕಲ್ಲುಗಳನ್ನು ಅಲುಗಾಡದಂತೆ ಜೋಡಿಸಿದ್ದರು.

"ಆ ಕಲ್ಲುಗಳ ಮೇಲೆ ನಿಂತು, ಮೊದಲ ಮಹಡಿಗೆ ಬರುವುದು ಸುಲಭ!" ಕರಮಚಂದನ ಊಹನೆ.

"ಆದ್ರೆ ಅದಕ್ಕೆ ಕಲ್ಲುಗಳ ಅಗತ್ಯವೇ ಇಲ್ಲ... ಪಾಗಾರದಿಂದ ಮೊದಲ ಮಹಡಿ ಅಷ್ಟೇನೂ ಎತ್ತರದಲ್ಲಿಲ್ಲ."

ಕಟ್ಟಡ ನಿರ್ಮಿಸುವಾಗ ಸರಿಯಾಗಿ ಸೆಟ್ ಬ್ಯಾಕ್ ಬಿಡದೇ ಇದ್ದುದರಿಂದ, ಪಾಗಾರಕ್ಕೆ ಅತಿ ಸನಿಹದಲ್ಲಿತ್ತು. ಅದರಿಂದಾಗಿ, ಪಾಗಾರದಿಂದ ತುಸು ಎತ್ತರದಲ್ಲೇ ಮೊದಲ ಮಹಡಿಯಿತ್ತು. ಕಷ್ಟ ಪಟ್ಟರೆ ಎತ್ತರದ ಆಸಾಮಿ ಪ್ಯಾಸೇಜಿನ ಕಟಕಟೆ ಹಿಡಿದು ಮೇಲೆ ಬರುವುದು ಸಾಧ್ಯವಿತ್ತು!

"ಹಾಗಿದ್ದರೆ ಅದರ ಅರ್ಥ... ಅದನ್ನೇರಿ ಬರುವಂತಹವನು ಕುಳ್ಳನಾಗಿರಬೇಕು!"

ನಂತರ ಕರಮಚಂದನ ಗಮನ ಸೆಳೆದುದು ಪಕ್ಕದಲ್ಲಿದ್ದ ಹಳೆಯ ಕಟ್ಟಡ. ಸಾಕಷ್ಟು ಜೀರ್ಣಗೊಂಡ ಆ ಕಟ್ಟಡವನ್ನು ಕರಮಚಂದ ಬಹಳ ಹೊತ್ತು ತದೇಕ ದೃಷ್ಟಿಯಿಂದ ಗಮನಿಸಿದ. ಡಿಸೋಜನಿಗೆ ಕಟ್ಟಡದಲ್ಲಿದ್ದ ಸಿಸಿಟೀವಿ ಕ್ಯಾಮೆರಾದ ಫೂಟೇಜ್ ನೀಡಲು ತಿಳಿಸಿ, ನಾವಲ್ಲಿಂದ ಹೊರಬಿದ್ದೆವು.